ಬಿಟ್ಟು ಹೋಗಬೇಕು. ಇವತ್ತಿನದಿವಸ ಎಲ್ಲರು ಭ್ರಷ್ಟರಾಗಿದ್ದರೆ ಚೆನ್ನಾಗಿತ್ತು ಎಂಬುದು ಅವರು ಇರಾದೆ ಎಂದು ಕಾಣುತ್ತದೆ. ಇದರಿಂದ ಎಷ್ಟು ನೋವನ್ನು ನಾನು ಮತ್ತು ನನ್ನ ಕುಟುಂಬದವರು ಅನುಭವಿಸಿರಬೇಕು ನೀವೇ ಹೇಳಿ? ಯಾರೋ ಸತ್ತರೆ ಆ ಕೇಸ್‌ನಲ್ಲಿ ನನ್ನನ್ನು ಅಪರಾಧಿ ಮಾಡುತ್ತಾರೆ. 7ನೇ ಘಟನೆ ನಡೆಯುತ್ತಿದೆ, 8ನೇ ತಾರೀಖಿನ ದಿವಸ ಕೌಂಟಿಗ್ ಇರುತ್ತದೆ. 12ನೇ ತಾರೀಖಿನ ದಿವಸ ನನ್ನ ಹೆಂಡತಿ ನನ್ನ ಮಗಳನ್ನು ನೋಡುವುದಕ್ಕೆ ವಿದೇಶಕ್ಕೆ ಹೋಗಬೇಕಾಗಿತ್ತು. ಈ ರೀತಿಯಾದಾಗ ನಮ್ಮ ಪರಿಸ್ಥಿತಿ ಏನಾಗಿರಬೇಕು? ನಾವೂ ಮನುಷ್ಯರಲ್ಲವೇ? ನಾವೇನು ಸ್ಟೀಲ್, ಸಿಮೆಂಟ್‌ನಿಂದ ಮಾಡಿದಂಥ ಜನರೇ? ನಾವು ಕೂಡ ಮಾಂಸ-ರಕ್ತಗಳಿಂದ ಇರತಕ್ಕಂಥರಲ್ಲವೆ? ಎಲ್ಲೋ ಒಂದು ಕಡೆ ಬಾಲಸುಬ್ರಹ್ಮಣ್ಯಿಯನ್‌ರವರ ವರದಿಯನ್ನು ಸ್ವಾಗತ ಮಾಡುವುದಕ್ಕೆ ಮತ್ತು ಅದನ್ನು ಅನುಷ್ಠಾನಗೊಳಿಸುವುದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ, ನಾನೇ ಇಂಥ ಒಂದು ಅವರ ಭೇಟಿಗೆ ಬಲಿಯಾಗಿದ್ದೇನೆ. ಮಾನ್ಯ ಎ.ಟಿ.ರಾಮಸ್ವಾಮಿಯವರ ಮತ್ತು ಅವರ ವರದಿಯನ್ನು ದಯಮಾಡಿ ತೆಗೆದುಕೊಳ್ಳಿ. ಬೆಂಗಳೂರಿನಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಜಮೀನನ್ನು ಯಾರ್‍ಯಾರು ಕಬಳಿಸಿದ್ದಾರೆಯೋ ಅವರೆಲ್ಲರನ್ನೂ ಗಲ್ಲಿಗೆ ಹಾಕಿ. ಒಂದು ವೇಳೆ ರಮೇಶ್ ಕುಮಾರ್ ಮಾಡಿದ್ದರೆ ನೀವು ಶಿಕ್ಷೆ ಕೊಡುವವರೆಗೆ ನಾನು ಕಾಯುವುದಿಲ್ಲ. ಸಾಬೀತು ಮಾಡಿ ಹೇಳಿದರೆ ನಾನೇ ಬಂದು ನೇಣುಕಂಬಕ್ಕೆ ನಿಂತುಬಿಡುತ್ತೇನೆ. ನನ್ನ ಗೋಳಿನ ಕತೆ ಹೇಳಿ ಮಾತು ಮುಕ್ತಾಯ ಮಾಡುತ್ತೇನೆ. ಸಹೃದಯಿಗಳಾದ ತಾವು ನನಗೆ ತೋರಿಸಿದ ಔದಾರ್ಯಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

9. ಪ್ರಕಟಣೆ

ಅಧ್ಯಕ್ಷರು :- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡೆವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್‌ನಲ್ಲಿ 2013ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ವಿಶೇಷ ಒಪ್ಪಂದಗಳು ವಿಧೇಯಕವನ್ನು ದಿನಾಂಕ 10-06-

2013 ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕಾರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಕರ್ನಾಟಕ ಪೋಲೀಸು (ತಿದ್ದುಪಡಿ) ವಿಧೇಯಕ, 2013

10. ಶಾಸನ ರಚನೆ

(ಅ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶೀ ಕೆ.ಜೆ. ಜಾರ್ಜ್ (ಗೃಹ ಸಚಿವರು) :– ಮಾನ್ಯ ಅಧ್ಯಕ್ಷರೆ, 2013ನೇ ಸಾಲಿನ ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು :– ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2013ನೇ ಸಾಲಿನ ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು)

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು

ಶೀ ಕೆ.ಜೆ. ಜಾರ್ಜ್ (ಗೃಹ ಸಚಿವರು) :– ಮಾನ್ಯ ಅಧ್ಯಕ್ಷರೆ, 2013ನೇ ಸಾಲಿನ ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು :ವಿಧೇಯಕವನ್ನು ಮಂಡಿಸಲಾಗಿದೆ.